**ತಕ್ಷಣ ಸುದ್ದಿ ಬಿಡುಗಡೆಗಾಗಿ**

# ವಿಶ್ವಬ್ಯಾಂಕ್

**ಸಂಪರ್ಕಿಸಿ** : ದೆಹಲಿಯಲ್ಲಿ : ಗೀತಾಂಜಲಿ ಚೋಪ್ರ : (91 11) 2461-7241
ಇ-ಮೈಲ್ : gchopra@worldbank.org
ವಾಷಿಂಗ್ಟನ್‌ನಲ್ಲಿ : ಕರಿನ ಮನಸ್ಸೆ (202) 473-1729
ಇ-ಮೈಲ್: kmanasseh@worldbank.org

## ಉತ್ತರಾಂಚಲದಲ್ಲಿ ವಾಟರ್‌ಶೆಡ್ ಯೋಜನೆಗಳಿಗೆ ವಿಶ್ವಬ್ಯಾಂಕಿನಿಂದ ಬೆಂಬಲ

ಈ ಯೋಜನೆಯಿಂದ ರಾಜ್ಯದ ಗ್ರಾಮೀಣ ಬಡ ಜನರಿಗೆ ಲಾಭ-ಪ್ರಯೋಜನ.

**ವಾಷಿಂಗ್ಟನ್, ಮೇ 20, 2004** - 69.6 ಮಿಲಿಯ ಡಾಲರುಗಳ ಸಾಲ ಮಂಜೂರಾತಿ ಒಂದನು-ವಿಶ್ವಬ್ಯಾಂಕ್ ಇಂದು ಮಂಜೂರು ಮಾಡಿದ್ದು, ಇದರಿಂದ ಉತ್ತರಾಂಚಲದ 9200 ಹಳ್ಳಿಗಳಿಗೆ ಲಾಭ-ಪ್ರಯೋಜನ ಸಿಗಲಿದೆ ಏಳು ವರ್ಷಗಳ ಈ ಉತ್ತರಾಂಚಲ ವಿಕೇಂದ್ರೀಕೃತ ವಾಟರ್‌ಶೆಡ್ ಅಭಿವೃದ್ಧಿ ಯೋಜನೆಯು ಪ್ರಾಕೃತಿಕ ಸಂಪನ್ಮೂಲಗಳ ಸಾಮರ್ಥ್ಯವನು-ಬಲಪಡಿಸಿ ಆಯ್ದ ವಾಟರ್‌ಶೆಡ್‌ಗಳಲ್ಲಿ ವಾಸ್ತವ್ಯ ಇರುವ ಜನರ ಆದಾಯವನು-ಸಾಮಾಜಿಕವಾಗಿ, ಸಾಂಸ್ಥಿಕವಾಗಿ ಹಾಗೂ ಪರಿಸರ ಪರವಾಗಿ, ನಿರಂತರವಾದ ಮಾರ್ಗೋಪಾಯಗಳಿಂದ ಹೆಚ್ಚಿಸುವ ಗುರಿ ಹೊಂದಿದೆ.

ಈ ಯೋಜನೆಯು ವಿಶ್ವ ಬ್ಯಾಂಕ್ ಹಣಕಾಸು ಒದಗಿಸಿದ ಎರಡನೇ ಸಮಗ್ರ ಪರ್ವತ ವಾಟರ್‌ಶೆಡ್ ಯೋಜನೆಯ ಸಫಲ ಅನುಭವದ ಮೇಲೆ ಆಧಾರಿತವಾಗಿದೆ. ಸಮಗ್ರ ವಾಟರ್‌ಶೆಡ್ ಯೋಜನೆಗಳಿಂದ ಹಲವಾರು ಸಕಾರಾತ್ಮಕ ಪರಿಣಾಮಗಳು ಉಂಟಾಗಿವೆ ಎಂದು ಅನೇಕ ಅಧ್ಯಯನಗಳು ತೋರಿಸಿಕೊಟ್ಟಿವೆ. ಅದು ಕೃಷಿ ಉತ್ಪಾದಕತೆಯನು-ವೃದ್ಧಿ ಪಡಿಸಿದೆ. ಪ್ರಾಕೃತಿಕ ಸಂಪನ್ಮೂಲ ತಳಹದಿಯನು-ಭದ್ರವಾಗಿಯೇ ಇರಿಸಿದೆ. ಉದಾಹರಣೆಗೆ, ಯೋಜನೆ ನಡೆದ ಪ್ರದೇಶಗಳಲ್ಲಿ ಫಲಾನುಭವಿಗಳ ಆದಾಯ ಶೇಕಡ 38ರಷ್ಟು ಅಧಿಕವಾಗಿದೆ. ಪ್ರಸ್ತಾವಿತ ಈ ಯೋಜನೆಯು ಈ ಸಫಲತಾ ಅನುಭವಗಳಿಂದ ಉತ್ತರಾಂಚಲದ ಹಿಮಾಲಯದಲ್ಲಿ ಸಮುದ್ರ ಮಟ್ಟದಿಂದ 700 ಮೀಟರುಗಳಿಂದ 2000 ಮೀಟರ್ ಎತ್ತರದಲ್ಲಿ 3,00,000 ಹೆಕ್ಟೇರು ಜಮೀನನು-ಒಳಗೊಳ್ಳಲಾಗುವುದು.

"ವಾಟರ್ ಶೆಡ್ ಅಭಿವೃದ್ಧಿ, ಪ್ರಾಕೃತಿಕ ಸಂಪನ್ಮೂಲಗಳ ಉತ್ಪಾದಕತೆ ಹೆಚ್ಚಿಸಲು, ಹಾಗೂ ಉತ್ತರಾಂಚಲದ ನಾಜೂಕು ಮತ್ತು ಸವೆತಕ್ಕೆ ಒಳಗಾಗುವ ಪರ್ವತ ಪ್ರದೇಶಗಳಲ್ಲಿ ವಾಸಮಾಡುವ ಜನರ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಅತೀ ಅಗತ್ಯ" ಎನುತ್ತಾರೆ ವಿಶ್ವಬ್ಯಾಂಕಿನ ಹಿರಿಯ ಗ್ರಾಮೀಣ ಅಭಿವೃದ್ಧಿ ವಿಶೇಷಜ್ಞ **ತಾಲಿಬ್ ಇಸ್ಮಾಯಿಲ್**. "ಉತ್ತರಾಂಚಲದ ವಿಕೇಂದ್ರೀಕತ ನೀತಿಗೆ ಬೆಂಬಲಿಸುವ ಈ ಯೋಜನೆಯು, ಪ್ರಜಾಸತ್ತಾತ್ಮಕವಾಗಿ ಆಯ್ಕೆ ಆದ ಗ್ರಾಮೀಣ ಆಡಳಿತಗಳ ಭಾಗವಹಿಸುವಿಕೆಯ ಅಭಿವೃದ್ಧಿ ನೀತಿಯನು-ಮುಂದುವರಿದ ಹಂತಕ್ಕೆ ಕೊಂಡೊಯ್ಯುತ್ತದೆ ಅಲ್ಲದೆ, ಯೋಜನೆ, ಆದ್ಯತೆಗೊಳಿಸುವಿಕೆ, ಹಣಕಾಸು ನಿರ್ವಹಣೆ, ಖರೀದಿ ಹಾಗೂ ಅನುಷ್ಠಾನದ ಗುರಿಗಳನು-ಹೊಂದಿರುತ್ತದೆ. ಈ ಯೋಜನೆಯು ಹಲವಾರು ಪ್ರಮುಖ ವಿಷಯಗಳಲ್ಲಿ ಗ್ರಾಮೀಣ ಸರಕಾರಗಳನು-ಬಲಪಡಿಸುತ್ತದೆ. ಮಹಿಳೆಯರು ಹಾಗೂ ಭೂರಹಿತರು ಸೇರಿದಂತೆ ಎಲ್ಲ ಸಮುದಾಯ ತಂಡಗಳ ಭಾಗವಹಿಸುವಿಕೆಯನು-ಈ ಯೋಜನೆಯು ಬಲಪಡಿಸುತ್ತದೆ."

**ಉತ್ತರಾಂಚಲ ವಾಟರ್ ಶೆಡ್ ಅಭಿವೃದ್ಧಿ ಯೋಜನೆ**ಯು ಮೂರು ಪ್ರಮುಖ ವಿಷಯಗಳನು-ಒಳಗೊಂಡಿದೆ. ಮೊದಲನೆಯದು ಅಂದರೆ, ಸಾಮಾಜಿಕ ಕ್ರೋಢೀಕರಣ ಮತ್ತು ಗ್ರಾಮೀಣ ಮಟ್ಟದಲ್ಲಿ ಸಮುದಾಯ ಮೂಲದ ಯೋಜನೆಗೆ ಉತ್ತೇಜನ ನೀಡಿ, ಭಾಗವಹಿಸುವಿಕೆಯ ವಾಟರ್ ಶೆಡ್ ಅಭಿವೃದ್ಧಿ ಯೋಜನೆಗೆ ಹಣಕಾಸು ಒದಗಿಸುವುದು. ಸರಕಾರದ ಸಿಬ್ಬಂದಿಗಳು ಮಾತ್ರವಲ್ಲದೆ ಈ ಭಾಗವಹಿಸುವಿಕೆಯ ಯೋಜನೆಯಲ್ಲಿ ಸರಕಾರೇತರ ಸಂಸ್ಥೆಗಳೂ ಸಹಾಯ ಒದಗಿಸಲಿವೆ. ಪ್ರತಿಯೊಂದು ಹಳ್ಳಿಯ ಬಜೆಟ್ ಕೂಡ ಪಾರದರ್ಶಕವಾಗಿದ್ದು, ಗ್ರಾಮೀಣ ಅಭಿವೃದ್ಧಿ ಹಾಗೂ ವಾಟರ್ ಶೆಡ್‌ಗೂ ಬಂಡವಾಳ ತೊಡಗಿಸುವ ವಿಷಯದಲ್ಲಿ ಆದ್ಯತೆ ನೀಡಿ, ಅನುಷ್ಠಾನಕ್ಕೆ ತಂದು ನಿರ್ವಹಿಸುವಲ್ಲಿ ಪೂರಕವಾಗಲಿದೆ.

ಎರಡನೇ ವಿಷಯ, ರೈತರ ಬಾಳು-ಬದುಕಿನ ಅವಕಾಶಗಳನು-ಹೆಚ್ಚಿಸುವ ಕ್ರಮಗಳಿಗೆ ಹಣಕಾಸು ಒದಗಿಸುವುದು. ಕೃಷಿ, ತೋಟಗಾರಿಕೆಯಲ್ಲಿ ಅಭಿವೃದ್ಧಿ ಪಡಿಸಿದ ತಂತ್ರಜ್ಞಾನ, ಬಳಕೆಯ ಪ್ರಾರಂಭ ಹಾಗೂ ರೈತರನು-ಖಾಸಗಿ ವಲಯದ ಉದ್ದಿಮೆದಾರರೊಂದಿಗೆ ಜೋಡಿಸಿ ಮಾರುಕಟ್ಟೆ ಅವಕಾಶಗಳನು-ಗುರುತಿಸಿ ಅಭವೃದ್ಧಿ ಪಡಿಸಲು ಅನುಕೂಲವಾಗುವಂತೆ ಎಗ್ರಿ ಬಿಜಿನೆಸ್ ನಿಧಿಯನು-ಸ್ಥಾಪಿಸುವುದು. ಸಣ್ಣ ಉದ್ದಿಮೆ ಚಟುವಟಿಕೆಗಳನು-ಪ್ರಾರಂಭಿಸುವುದು. ದುರ್ಬರ್ವರ್ಗದವರಿಗೆ ಅಂದರೆ, ಕೂಲಿ ಕೆಲಸಗಾರರಿಗೆ, ಮಹಿಳೆಯರಿಗೆ ಹಾಗೂ ಭೂರಹಿತ ರೈತರಿಗಾಗಿ ಕಿರು-ಉದ್ದಿಮೆಯಗಳಿಂದ ಸ್ವಲ್ಪ ಆದಾಯ ಹೆಚ್ಚಿಸುವಂತ ಚಟುವಟಿಕೆಗಳಿಗೂ ಹಣಕಾಸು ಒದಗಿಸುವುದು ಕೂಡ ಸೇರಿವೆ.

ಮೂರನೇ ಅಂಶ, ಚುನಾಯಿತ ಗ್ರಾಮೀಣ ಆಡಳಿತಗಳಿಗೆ (ಗ್ರಾಮ ಪಂಚಾಯತುಗಳಿಗೆ) ಹಾಗೂ ಸಮುದಾಯಗಳ ಯೋಜನಾ ಚಟುವಟಿಕೆಗಳಿಗೆ ಯೋಜನಾ ಸಂಯೋಜನೆ ಮತ್ತು ನಿಗಾವಹಿಸುವುದಕ್ಕೂ ಸಹ ಈ ಅಂಶದ ಅಡಿಯಲ್ಲಿಯೇ ಹಣಕಾಸು ಒದಗಿಸಲಾಗುವುದು.

ವಾಟರ್‌ಶೆಡ್ ನಿರ್ವಹಣಾ ನಿರ್ದೇಶನಾಲಯ ಈ ಯೋಜನೆಯನು-ಕಾರ್ಯರೂಪಕ್ಕೆ ತರಲಿದೆ. 69.6 ಮಿಲಿಯ ಬಡ್ಡಿ ರಹಿತ ಸಾಲವನು-ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ನೀಡುತ್ತಿದ್ದು 0.75 ಶೇಕಡ ಸೇವಾ ಶುಲ್ಕವನು-ಒಳಗೊಂಡಿದೆ. 10 ವರ್ಷಗಳ ಹೆಚ್ಚುವರಿ ಸಮಯಾವಕಾಶದೊಂದಿಗೆ, 35 ವರ್ಷಗಳಲ್ಲಿ ಮೆಚುರಿಟಿ ಅವಧಿ ಹೊಂದಿದೆ.

ಭಾರತದಲ್ಲಿ ವಿಶ್ವಬ್ಯಾಂಕಿನ ಚಟುವಟಿಕೆಯ ಕುರಿತಾದ ಹೆಚ್ಚಿನ ಮಾಹಿತಿಗಳಿಗಾಗಿ ನೋಡಿರಿ:
*http://www.worldbank.org.in/*

ಈ ಯೋಜನೆ ಕುರಿತು ಹೆಚ್ಚಿನ ಮಾಹಿತಿಗಾಗಿ ನೋಡಿರಿ:
*http://web.worldbank.org/external/projects/main?pagePK=104231&piPK=73230&theSitePK=40941&menuPK=228424&Projectid=P078550*